# ಹಾಳೆಯಲ್ಲಿ ಅರಳಿದ ಚಿಟ್ಟೆ

ನಾವು ಬಿಳಿಹಾಳೆಯನ್ನು ಬರೆಯಲು ಉಪಯೋಗಿಸುತ್ತೇವೆ. ಬಳ್ಳಾರಿಯ ಶಿಕ್ಷಕರಾದ ಅರುಣಕುಮಾರ ಅವರು ಬಿಳಿಹಾಳೆಯಲ್ಲಿ ವಿಭಿನ್ನವಾದ ಕಲೆಯನ್ನು ಸೃಷ್ಟಿಸುವರು. ಅವರು ಬಿಳಿಹಾಳೆಯಲ್ಲಿ ಅನೇಕ ಕೀಟಗಳನ್ನು ಮಾಡಿದ್ದಾರೆ. ಅವುಗಳ ಪೈಕಿ ಈ ಚಿತ್ರದಲ್ಲಿರುವ ಚಿಟ್ಟೆಯೂ ಒಂದು. ಇದು ಕಲಾಕೃತಿ ನೈಜ ಚಿಟ್ಟೆಯಂತೆ ಕಾಣುತ್ತದೆ. ಬಿಳಿಹಾಳೆಯ ಕಲೆಯ ಮೂಲಕ ಅರುಣಕುಮಾರ ಎಲ್ಲರ ಗಮನ ಸೆಳೆಯುತ್ತಿದ್ದಾರೆ.

**-ಜಗದೀಶ ಎಂ.ಸಂಗಣ್ಣವರ, ಹುಣಶೀಕಟ್ಟಿ**





# ಪಾಂಡಕ ಶಿಲೆ

ಶ್ವೇತವರ್ಣದ ಮಾರ್ಬಲ್‌ನಲ್ಲಿ ಚೌಕಾಕಾರವಾಗಿ ನಿರ್ಮಿತವಾದ ಈ ಮಂದಿರದಲ್ಲಿ ಮೂರ್ತಿಗೆ ಸ್ಥಾನವಿಲ್ಲ. ಪೌರಾಣಿಕ ದಂತಕಥೆಯಂತೆ ಇಂದ್ರ ಇಂದ್ರಾಣಿಯರಿಂದ ತೀರ್ಥಂಕರರಿಗೆ ಅಭಿಷೇಕ ಮಾಡಿ ದೀಪ ಧೂಪಕ್ಕೊಳಪಡುವ ಈ ಮಂದಿರಕ್ಕೆ ಪಾಂಡಕ ಶಿಲೆ ಎನ್ನುತ್ತಾರೆ. ಆದರೆ ಮೂರ್ತಿ ಪೂಜೆ ಇಲ್ಲದಿರುವುದು ವಿಚಿತ್ರವಾದರೂ ಸತ್ಯ. ಇದನ್ನು ವಿಜಯಪುರದ ಜತ್ತ ರಸ್ತೆಯಲ್ಲಿರುವ 1008 ಸಹಸ್ರಫಣಿ ದಿಗಂಬರ ಜೈನ ಮಂದಿರದಲ್ಲಿ ಕಾಣಬಹುದು.

**-ಪಂಡಿತರಾವ ಪಾಟೀಲ, ಸರಸಂಬಾ**

# ದರಗು ತುಂಬುವ ಸಂಭ್ರಮ

ಈಗ ಸಾಮಾನ್ಯವಾಗಿ ಮಲೆನಾಡಿನಲ್ಲಿ ಗಿಡ, ಮರಗಳ ಎಲೆಗಳೆಲ್ಲ ಉದುರಿ ಕಾನಿನ ತುಂಬೆಲ್ಲಾ ಹರಡಿ ಬಿದ್ದಿರುವ ಸಮಯ. ಕೃಷಿ ಚಟುವಟಿಕೆಗಳು ಕ್ರಿಯಾಶೀಲಗೊಂಡಿರುವ ಈ ದಿನಗಳಲ್ಲಿ ಕೃಷಿಕರಿಗೆ ದರಗು (ಒಣ ಎಲೆ) ತುಂಬುವ ಧಾವಂತ ಕೂಡ. ಈ ಮೊದಲು ಕೋಣಗಳನ್ನು ಕಟ್ಟಿದ ಗಾಡಿಗಳಲ್ಲಿ ದರಗು ಒತ್ತಿ ಒತ್ತಿ ತುಂಬಿ ತರುತ್ತಿದ್ದರು. ಇಂದಿನ ಪರಿಸ್ಥಿತಿಯೇ ವಿಭಿನ್ನವಾಗಿದ್ದು ಯಂತ್ರಗಳು ಮಲೆನಾಡಿಗೆ ಅನಿವಾರ್ಯವಾಗಿವೆ. ಇಲ್ಲಿ ನೋಡಿ ಟಿಲ್ಲರ್‌ನಲ್ಲಿ 'ದೇವರ ರಥ'ದ ರೀತಿ 'ದರಗು ರಥ' ಹೇಗೆ ಸಂಭ್ರಮದಿಂದ ಸಾಗುತ್ತಿದೆ.

**-ರೂಪಾ ಗರತಿಕೆರೆ, ಶಿವಮೊಗ್ಗ**

